## 16. ಹೊಸ ಭಾರತಕ್ಕೆ ಹೊಸ ಶಿಕ್ಷಣ ನೀತಿಯ ದಿಕ್ಸೂಚಿ

2020ರ ಹೊಸ ಶಿಕ್ಷಣ ನೀತಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. 34 ವರ್ಷಗಳ ಬಳಿಕ ಹೊಸ ನೀತಿಯನ್ನು ಜಾರಿಗೆ ತರಲಾಗುತ್ತಿದೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ, ಉನ್ನತ ಶಿಕ್ಷಣವನ್ನು ಮತ್ತಷ್ಟು ಸ್ಪರ್ಧಾತ್ಮಕಗೊಳಿಸುವ ಅಂಶಗಳು ಈ ನೀತಿಯಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇದು ಭಾರತ ಕೇಂದ್ರಿತ ಶಿಕ್ಷಣ ನೀತಿಯಾಗಿದ್ದು, ಮಕ್ಕಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಹೊಸ ಭಾರತದಲ್ಲಿ ಹೊಸ ಶಿಕ್ಷಣ ನೀತಿಯು ಹೊಸ ಯುಗಕ್ಕೆ ದಾರಿ ದೀಪವಾಗಲಿದೆ.

**ಹೊಸ ಪದ್ಧತಿ:** 10+2 ಬದಲಿಗೆ 5+3+3+4:– ರಾಷ್ಟ್ರೀಯ ಶಿಕ್ಷಣ ನೀತಿ–2020 ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿ ಪೂರ್ವ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರ ಪರಿಷ್ಕರಿಸಲಿದೆ. ಹೊಸ ನೀತಿಯ ಪ್ರಕಾರ 10 ಪ್ಲಸ್ 2 ಪದ್ಧತಿಯನ್ನು 5+3+3+4ಆಗಿ ಬದಲಿಸಲಾಗಿದೆ. ಅಂದರೆ, ಮೊದಲ ಐದು ವರ್ಷದ ಶಿಕ್ಷಣವನ್ನು ಮೂಲಭೂತ ಶಿಕ್ಷಣ ಹಂತ ಎಂದು ಪರಿಗಣಿಸಲಾಗುತ್ತದೆ. ಇದರಲ್ಲಿ ಪೂರ್ವ ಪ್ರಾಥಮಿಕದ ಮೂರು ವರ್ಷ ಹಾಗೂ 1ನೇ ಹಾಗೂ 2ನೇ ತರಗತಿಗಳನ್ನು ಸೇರಿಸಲಾಗಿದೆ. ಮುಂದಿನ ಮೂರು ವರ್ಷ (3 ರಿಂದ 5ನೇ ತರಗತಿ)ಗಳು 'ಸಿದ್ಧತಾ ಹಂತ'ವಾಗಿದ್ದರೆ ನಂತರದ 3 ವರ್ಷ (6 ರಿಂದ 8ನೇ ತರಗತಿ) 'ಮಧ್ಯಮ ಹಂತ'ದ ಶಿಕ್ಷಣವಾಗಿರುತ್ತದೆ. ಕೊನೆಯ ನಾಲ್ಕು ವರ್ಷಗಳು (9 ರಿಂದ 12ನೇ ತರಗತಿ) 'ಪ್ರೌಢ ಶಿಕ್ಷಣದ ಹಂತವಾಗಿರುತ್ತದೆ. ಇದರೊಂದಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಾಗಿದೆ.

| | | |
|---|---|---|
| ಮೊದಲ | 5 ವರ್ಷ | ಮೂಲಭೂತ ಹಂತ |
| ನಂತರದ | 3 ವರ್ಷ | ಸಿದ್ಧತಾ ಹಂತ |
| ನಂತರದ | 3 ವರ್ಷ | ಮಧ್ಯಮ ಹಂತ |
| ಕೊನೆಯ | 5 ವರ್ಷ | ಪ್ರೌಢ ಹಂತ |

**5ನೇ ತರಗತಿ ತನಕ ಮಾತೃ ಭಾಷೆಯಲ್ಲೇ ಶಿಕ್ಷಣ:** ಸಾಧ್ಯವಿದ್ದಲ್ಲಿ ಕನಿಷ್ಠ 5ನೇ ತರಗತಿಯವರೆಗೂ ಮಾತೃ ಭಾಷೆ, ಪ್ರಾದೇಶಿಕ ಅಥವಾ ಸ್ಥಳೀಯ ಭಾಷೆಯಲ್ಲೇ ಶಿಕ್ಷಣ ನೀಡಬೇಕು ಮತ್ತು ಅದನ್ನು 8ನೇ ತರಗತಿ ಅಥವಾ ಅದಕ್ಕಿಂತ ಹೆಚ್ಚಿನ ತರಗತಿಯವರೆಗೂ ವಿಸ್ತರಿಸಬಹುದು. ಭಾರತೀಯ ಭಾಷೆಗಳು ಫನ್ ಪ್ರಾಜೆಕ್ಟ್ ಅಥವಾ ಚಟುವಟಿಕೆಯನ್ನು ಪ್ರತಿ ವಿದ್ಯಾರ್ಥಿಗೆ ನೀಡಬೇಕು. ತ್ರಿಭಾಷಾ ಸೂತ್ರದಡಿ ಕಲಿಕೆ ಸಾಗಬೇಕು. ಹಾಗೆಯೇ ಕನ್ನಡವೂ ಸೇರಿದಂತೆ ಎಲ್ಲ ಶಾಸ್ತ್ರೀಯ ಭಾಷೆಗಳು ಲಭ್ಯವಾಗಿರಬೇಕು.

**ಪ್ರತಿ ವರ್ಷ ಇಲ್ಲ ಪರೀಕ್ಷೆ:** ಹಾಲಿ ವ್ಯವಸ್ಥೆಯಲ್ಲಿ ಪ್ರತಿ ವರ್ಷ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ. ಹೊಸ ನೀತಿಯ ಪ್ರಕಾರ 3,5 ಮತ್ತು 8ನೇ ತರಗತಿಗೆ ಮಾತ್ರ ಪರೀಕ್ಷೆ ಇರಲಿದೆ. ಉಳಿದ ವರ್ಷ ತರಗತಿಗಳ ಮೌಲ್ಯಮಾಪನವು ನಿಯಮಿತದ ಮತ್ತು ರಚನಾತ್ಮಕ ಶೈಲಿಯದ್ದಾಗಿರುತ್ತದೆ. ಅಂದರೆ, ಸ್ಪರ್ಧಾತ್ಮಕ ಆಧಾರಿತ ಕಲಿಕಾ ಉತ್ತೇಜನ ಮತ್ತು ಅಭಿವೃದ್ಧಿ ವಿಶ್ಲೇಷಣೆ, ವಿಮರ್ಶಾತ್ಮಕ, ಚಿಂತನೆ ಮತ್ತು ಪರಿಕಲ್ಪನೆಯಂಥ ಸ್ಪಷ್ಟತೆಯನ್ನು ಮೂಡಿಸುವ ಅತ್ಯುತ್ತಮ ಕೌಶಲದ ಶಿಕ್ಷಣವನ್ನು ಇದು ಒದಗಿಸುತ್ತದೆ.

**ಬೋರ್ಡ್ ಎಕ್ಸಾಮ್ ಪದ್ಧತಿ ಪರಿಷ್ಕರಣೆ:** 10 ಮತ್ತು 12ನೇ ತರಗತಿಗಳಿಗೆ ಮಾತ್ರ ಬೋರ್ಡ್ ಎಕ್ಸಾಮ್ ಇರುತ್ತದೆ. ಈ ಪರೀಕ್ಷೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ತರಲಾಗುತ್ತಿದೆ. ಸಿಬಿಎಸ್ಇಯಲ್ಲಿ ಗಣಿತ ಇರುವಂತೆ ಎಲ್ಲ ಕೋರ್ಸ್‌ಗಳನ್ನು ಎರಡು ಭಾಷೆಗಳಲ್ಲಿ ನೀಡಲಾಗುತ್ತದೆ. ರಾಜ್ಯಗಳಲ್ಲೂ ಬೋರ್ಡ್ ಪರೀಕ್ಷೆಗಳು ಜ್ಞಾನಾಧಾರಿತ ಪರೀಕ್ಷೆಗಳಾಗಿರಲಿವೆ ಹೊರತು ಕಲಿಕೆಯ ಉದ್ದೇಶ ಮಾತ್ರವೇ ಆಗಿರುವುದಿಲ್ಲ. ಪ್ರತಿ ವಿಷಯವೂ ಆಬ್ಜೆಕ್ಟಿವ್ ಮತ್ತು ವಿವರಣಾತ್ಮಕ ಪರೀಕ್ಷೆ ಹೊಂದಿರುತ್ತದೆ.

**ಲೋಕ ವಿದ್ಯಾ:** 6 ರಿಂದ 8ನೇ ತರಗತಿಯ ಎಲ್ಲ ಮಕ್ಕಳಿಗೆ ಸ್ಥಳೀಯ ವೃತ್ತಿಪರ ಕೌಶಲದ ಜ್ಞಾನ ನೀಡಲಾಗುವುದು. ಅಂದರೆ ಬಡಿಗ, ಮಾಲಿ, ಕುಂಬಾರ, ಕಲಾವಿದ ಇತ್ಯಾದಿ ಕೌಶಲಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಡ್ರಾಪೌಟ್ ಆದ್ರೂ ಸಿಗುತ್ತೆ ಸರ್ಟಿಫಿಕೇಟ್:–** ಹೊಸ ಶಿಕ್ಷಣ ನೀತಿಯಲ್ಲಿ ಪದವಿ ಪೂರ್ವ ಮತ್ತು ಪದವಿ ಶಿಕ್ಷಣವು ವಿಲೀನವಾಗಲಿದ್ದು, ಶಿಕ್ಷಣವು 3 ಮತ್ತು 4 ವರ್ಷಗಳ ಅವಧಿಯದ್ದಾಗಿರುತ್ತದೆ. ಇಲ್ಲಿ ವಿದ್ಯಾರ್ಥಿಗಳು ಪೂರ್ಣ ಕೋರ್ಸ್ ಮುಗಿಸದೇ ಮಧ್ಯದಲ್ಲಿ ಕೋರ್ಸ್‌ನಿಂದ ನಿರ್ಗಮಿಸಬಹುದು. ಆದರೆ, ಇದನ್ನು ಕೋರ್ಸ್‌ನಿಂದ ಅಪೂರ್ಣ ಎಂದು ಪರಿಗಣಿಸುವುದಿಲ್ಲ. 1 ವರ್ಷ ಪೂರೈಸಿದ ಬಳಿಕ ವೃತ್ತಿಪರ ಶಿಕ್ಷಣ ಸೇರಿದಂತೆ ಅವರು ಆಯ್ಕೆ ಮಾಡಿಕೊಂಡಿದ್ದ ವಿಷಯದಲ್ಲಿ ಪ್ರಮಾಣ ಪತ್ರ ನೀಡಲಾಗುತ್ತದೆ. ವಿದ್ಯಾರ್ಥಿ 2 ವರ್ಷ ಪೂರೈಸಿದರೆ ಡಿಪ್ಲೊಮಾ ಪದವಿ ಪ್ರಮಾಣ ಪತ್ರ ದೊರೆಯಲಿದೆ. ವಿದ್ಯಾರ್ಥಿಯು ಐಚ್ಛಿಕವಾಗಿ 4 ವರ್ಷದ ಡಿಗ್ರಿಯನ್ನೂ ಆಯ್ದುಕೊಳ್ಳಬಹುದು.

**ಕೇಂದ್ರಿಯ ನಿಯಂತ್ರಕ ವ್ಯವಸ್ಥೆ:** ಎಲ್ಲಾ ಉನ್ನತ ಶೈಕ್ಷಣಿಕ ಸಂಸ್ಥೆಗಳನ್ನು ನಿಯಂತ್ರಿಸಲು ಯುಜಿಸಿ ಮಾದರಿಯಲ್ಲಿ ಭಾರತೀಯ ಉನ್ನತ ಶಿಕ್ಷಣ ಮಂಡಳಿ (ಎಚ್‌ಇಸಿಐ) ಸ್ಥಾಪನೆಯಾಗಲಿದೆ. ಶಿಕ್ಷಕರ ತರಬೇತಿ ಸೇರಿದಂತೆ ಎಲ್ಲಾ ರೀತಿಯ ಶಿಕ್ಷಣಕ್ಕೆ ಇದು ಏಕ ಗವಾಕ್ಷಿ ನಿಯಂತ್ರಣ ಪ್ರಾಧಿಕಾರವಾಗಿರುತ್ತದೆ.

**ಸಾಮಾನ್ಯ ಪ್ರವೇಶ ಪರೀಕ್ಷೆ:** ಎಲ್ಲಾ ವಿವಿಗಳಲ್ಲಿ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಏಕ ರೀತಿಯ ಸಾಮಾನ್ಯ ಪರೀಕ್ಷೆಯನ್ನು ನಡೆಸಲಿದೆ. ಆದರೆ ಆಯಾ ವಿಷಯಗಳಿಗೆ ತಕ್ಕಂತೆ ವಿಭಿನ್ನ ಪ್ರಶ್ನೆ ಪತ್ರಿಕೆಗಳನ್ನು ಒದಗಿಸಲಿದೆ.

ಹೊಸ ಶಿಕ್ಷಣ ನೀತಿಯು ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದಕ್ಕೆ ಒತ್ತು ನೀಡುವುದಲ್ಲದೆ, ಯಾವುದೇ ವಿದ್ಯಾರ್ಥಿ ತನ್ನ ಶೈಕ್ಷಣಿಕ ಹಿನ್ನೆಲೆಯನ್ನು ಲೆಕ್ಕಿಸದೆ ಯಾವುದೇ ವಿಷಯವನ್ನು ಓದಲು ಅವಕಾಶ ನೀಡುತ್ತದೆ. ಅಂದರೆ ಎಂಜಿನಿಯರಿಂಗ್ ವಿದ್ಯಾರ್ಥಿಯು ಇತಿಹಾಸ ಓದಬಹುದು ಕಲಾ ವಿಭಾಗದ ವಿದ್ಯಾರ್ಥಿಯು ಭೌತಶಾಸ್ತ್ರ ಅಥವಾ ಗಣಿತವನ್ನು ಒಂದು ವಿಷಯವಾಗಿ ಆಯ್ದುಕೊಳ್ಳಬಹುದು.

**ರಾಜ್ಯದಲ್ಲೂ ಹೊಸ ನೀತಿ ಜಾರಿ:** ಈಗಾಗಲೇ ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವ ಬಗ್ಗೆ ಸೂಕ್ತ ಸಲಹೆ–ಸಹಕಾರ ನೀಡಲು ನಿವೃತ್ತ ಐಎಎಸ್ ಅಧಿಕಾರಿ ಎಸ್.ವಿ. ರಂಗನಾಥ್ ನೇತೃತ್ವದಲ್ಲಿ ಕಾಯ್ದೆ ರಚಿಸಿದೆ. ಕೇಂದ್ರ ಸರ್ಕಾರವು ಜಾರಿ ಮಾಡಿದ ಕೂಡಲೇ ರಾಜ್ಯದಲ್ಲಿಯು ನೀತಿ ಅನುಷ್ಠಾನಕ್ಕೆ ತರಲಾಗುವುದು ಎಂದು ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ ಅವರು ತಿಳಿಸಿದ್ದಾರೆ.

ಆಧಾರ:ವಿಜಯಕರ್ನಾಟಕ, ದಿನಾಂಕ:30.07.2020